THE HINDU MANGALURU
SATURDAY, OCTOBER 2, 2021

# KMC launches blood centre van

SPECIAL CORRESPONDENT
MANGALURU

The Kasturba Medical College Hospital in Manipal on Friday launched the dedicated blood centre van on the occasion of National Voluntary Blood Donation Day.

Speaking at the programme, Dean of College Sharath Kumar Rao said donating blood without any desire is an important part of humanity in the process of saving lives. MAHE Director (General Services) Col. B. Prakash Chandra called upon all organisations to motivate their staff for blood donation.

The hospital felicitated Udupi City unit of BJP Yuva Morcha, Mogaveera Yuva Sanghatane, and others.

ವಿಜಯವಾಣಿ

ಭಾನುವಾರ 3 ಅಕ್ಟೋಬರ್ 2021 ● 3 OCTOBER 2021
● VIJAYAVANI » MANGALURU

## ಶಿಬಿರದಿಂದ ರಕ್ತ ರವಾನಿಸುವ ವಾಹನ ಲೋಕಾರ್ಪಣೆ

# ಕೆಎಂಸಿ ಸ್ವಯಂಪ್ರೇರಿತ ರಕ್ತದಾನ ದಿನ

■ ವಿಜಯವಾಣಿ ಸುದ್ದಿಜಾಲ ಉಡುಪಿ

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ರಕ್ತ ಕೇಂದ್ರದ ವತಿಯಿಂದ ಶುಕ್ರವಾರ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನ ಆಚರಿಸಲಾಯಿತು.

ಶಿಬಿರಗಳಿಗೆ ಅಗತ್ಯ ಸಲಕರಣೆ ಕೊಂಡೊಯ್ಯಲು ಮತ್ತು ಸಂಗ್ರಹಿಸಿದ ರಕ್ತವನ್ನು ಸರಿಯಾದ ರೀತಿಯಲ್ಲಿ ರಕ್ತನಿಧಿಗೆ ತಲುಪಿಸಲು ಸುಸಜ್ಜಿತ ವಾಹನವನ್ನು ಲೋಕಾರ್ಪಣೆ ಮಾಡಲಾಯಿತು. ರಕ್ತದಾನ ಶಿಬಿರ ಏರ್ಪಡಿಸುತ್ತಿರುವ ಸಂಘ ಸಂಸ್ಥೆಗಳನ್ನು ಅಭಿನಂದಿಸಲಾಯಿತು.



ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ರಕ್ತ ಕೇಂದ್ರದ ವತಿಯಿಂದ ನೂತನ ವಾಹನ ಲೋಕಾರ್ಪಣೆಗೊಳಿಸಲಾಯಿತು. ಕರ್ನಲ್ ಪ್ರಕಾಶ್ ಚಂದ್ರ ಬಿ, ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ. ಮುತ್ತಣ್ಣ, ರಕ್ತನಿಧಿ ವಿಭಾಗದ ಡಾ. ಶಮೀ ಶಾಸ್ತ್ರಿ ಇದ್ದರು.

ಮಣಿಪಾಲ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಶರತ್ ಕುಮಾರ್ ರಾವ್ ಅತಿಥಿಯಾಗಿದ್ದರು. ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಡೈರೆಕ್ಟರ್ ಜನರಲ್ ಸರ್ವೀಸಸ್ ಕರ್ನಲ್ ಪ್ರಕಾಶ್ ಚಂದ್ರ ಬಿ., ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ. ಮುತ್ತಣ್ಣ, ರಕ್ತನಿಧಿ ವಿಭಾಗದ ಡಾ. ಶಮೀ ಶಾಸ್ತ್ರಿ ಉಪಸ್ಥಿತರಿದ್ದರು.

ಹಲವಾರು ವರ್ಷಗಳಿಂದ ರಕ್ತದಾನ ಶಿಬಿರಗಳ ಮೂಲಕ ಕಸ್ತೂರ್ಬಾ ಆಸ್ಪತ್ರೆಯೊಂದಿಗೆ ಕೈಜೋಡಿಸಿದ ಬಿಜೆಪಿ ನಗರ ಯುವ ಮೋರ್ಚಾ, ಉಡುಪಿ ಮೊಗವೀರಯುವಸಂಘಟನೆ, ಅಭಯಹಸ್ತ ಚಾರಿಟೆಬಲ್ ಟ್ರಸ್ಟ್, ವಿಷ್ಣುಮೂರ್ತಿ ಸ್ನೇಹಿತರು ದೊಡ್ಡಣಗುಡ್ಡೆ, ಮಿಲಾಗ್ರಿಸ್ ಕಾಲೇಜು, ಮಣಿಪಾಲ ಟೆಕ್ನಾಲಜಿಸ್ ಲಿಮಿಟೆಡ್, ಕರಾವಳಿ ಯುವಕರು ಕ್ಲಬ್, ಹಿಂದು ಜಾಗರಣ ವೇದಿಕೆ, ಮಧ್ವವಾದಿರಾಜ ತಂತ್ರಜ್ಞಾನ ಮತ್ತು ನಿರ್ವಹಣಾ ಸಂಸ್ಥೆ ಬಂಟಕಲ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತೆಂಕನಿಡಿಯೂರು, ಮಹಾತ್ಮ ಗಾಂಧಿ ವೈದ್ಯಕೀಯ ಕಾಲೇಜು, ಜಿಲ್ಲಾ ವಿಶ್ವಕರ್ಮ ಕಾರ್ಪೆಂಟರ್ಸ್ ಯೂನಿಯನ್ ಪ್ರತಿನಿಧಿಗಳನ್ನು ಅಭಿನಂದಿಸಲಾಯಿತು.

ಪ್ರಜಾವಾಣಿ

ಶನಿವಾರ • ಅಕ್ಟೋಬರ್ 2, 2021

# 'ಜೀವ ಉಳಿಸುವ ಕಾರ್ಯಕ್ಕೆ ಕೈಜೋಡಿಸಿ'

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ರಕ್ತ ಕೇಂದ್ರವು ಶುಕ್ರವಾರ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನ ಆಚರಿಸಿತು. ರಕ್ತದಾನ ಶಿಬಿರಗಳಿಗೆ ಅಗತ್ಯ ಸಲಕರಣೆಗಳನ್ನು ಕೊಂಡೊಯ್ಯಲು ಹಾಗೂ ಸಂಗ್ರಹಿಸಿದ ರಕ್ತವನ್ನು ಸರಿಯಾದ ಸಮಯಕ್ಕೆ ರಕ್ತನಿಧಿಗೆ ತಲುಪಿಸಲು ಸುಸಜ್ಜಿತ ವಾಹನವನ್ನು ಲೋಕಾರ್ಪಣೆ ಮಾಡಲಾಯಿತು.

ರಕ್ತದಾನ ಶಿಬಿರಗಳನ್ನು ಆಯೋಜಿಸುವ ಹಾಗೂ ಸಾರ್ವಜನಿಕರಲ್ಲಿ ರಕ್ತದಾನದ ಅರಿವು ಮೂಡಿಸುವ ಸಂಘ ಸಂಸ್ಥೆಗಳನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಕಸ್ತೂರಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಶರತ್ ಕುಮಾರ್ ಮಾತನಾಡಿ, 'ರಕ್ತದಾನ ಮಾಡುವವರು ಯಾರು, ಸ್ವೀಕರಿಸುವವರು ಯಾರು ಎಂಬುದು ಮುಖ್ಯವಲ್ಲ ಎಂದರು.

ಮಾಹೆ ಡೈರೆಕ್ಟರ್ ಜನರಲ್ ಸರ್ವೀಸಸ್‌ನ ಕರ್ನಲ್ ಬಿ.ಪ್ರಕಾಶ್ ಚಂದ್ರ, ಆಸ್ಪತ್ರೆಯ ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ.ಮುತ್ತಣ್ಣ ರಕ್ತದಾನದ ಮಹತ್ವದ ಬಗ್ಗೆ ಮಾತನಾಡಿದರು.

ರಕ್ತದಾನ ಶಿಬಿರಗಳ ಮೂಲಕ ಆಸ್ಪತ್ರೆಯೊಂದಿಗೆ ಕೈಜೋಡಿಸಿರುವ, ಬಿಜೆಪಿ ಯುವ ಮೋರ್ಚಾ, ಮೊಗವೀರ ಯುವ ಸಂಘಟನೆ, ಅಭಯಹಸ್ತ ಚಾರಿಟಬಲ್ ಟ್ರಸ್ಟ್, ವಿಷ್ಣುಮೂರ್ತಿ ಸ್ನೇಹಿತರು ದೊಡ್ಡನಗುಡ್ಡೆ, ಮಿಲಾಗ್ರಿಸ್ ಕಾಲೇಜು ಕಲ್ಯಾಣಪುರ, ಮಣಿಪಾಲ ಟೆಕ್ನಾಲಜೀಸ್ ಲಿಮಿಟೆಡ್, ಕರಾವಳಿ ಯುವಕರು ಕ್ಲಬ್, ಹಿಂದೂ ಜಾಗರಣ ವೇದಿಕೆ, ಮಾಧವ ವಾದಿರಾಜ ತಂತ್ರಜ್ಞಾನ ಮತ್ತು ನಿರ್ವಹಣಾ ಸಂಸ್ಥೆ,



ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ರಕ್ತ ಕೇಂದ್ರವು ಶುಕ್ರವಾರ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನದ ಅಂಗವಾಗಿ ರಕ್ತ ಸಂಗ್ರಹ ವಾಹನಕ್ಕೆ ಚಾಲನೆ ನೀಡಲಾಯಿತು.

ತೆಂಕನಿಡಿಯೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಹಾತ್ಮ ಗಾಂಧಿ ವೈದ್ಯಕೀಯ ಕಾಲೇಜು ಕುಂಜಿಬೆಟ್ಟು, ಜಿಲ್ಲಾ ವಿಶ್ವಕರ್ಮ ಕಾರ್ಪೆಂಟರ್ಸ್ ಯೂನಿಯನ್ ಸಂಸ್ಥೆ ಅಭಿನಂದಿಸಲಾಯಿತು. ಇಮ್ಯುನೊ ಹೆಮಾಟಾಲಜಿ ಮತ್ತು ರಕ್ತ ವರ್ಗಾವಣೆ ವಿಭಾಗದ ಮುಖ್ಯಸ್ಥೆ ಡಾ.ಶಮೀ ಶಾಸ್ತ್ರಿ, ಅಫೆರೆಸಿಸ್ ದಾನ ಮತ್ತು ಸ್ಟೆಮ್ ಸೆಲ್ ಅಗತ್ಯ ಬಗ್ಗೆ ಉಲ್ಲೇಖಿಸಿದರು.

ಉದಯವಾಣಿ ಸುದಿನ

ಮಣಿಪಾಲ

2021

ಅಕ್ಟೋಬರ್ 2 ಶನಿವಾರ

## ▸ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ

# ರಕ್ತದಾನ ದಿನಾಚರಣೆ, ವ್ಯಾನ್ ಲೋಕಾರ್ಪಣೆ



**ಉಡುಪಿ, ಅ. 1:** ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ, ಶಿಬಿರಗಳಿಗೆ ಅಗತ್ಯ ಸಲಕರಣೆಗಳನ್ನು ಕೊಂಡೊಯ್ಯಲು ಮತ್ತು ಸಂಗ್ರಹಿಸಿದ ರಕ್ತವನ್ನು ಸರಿಯಾದ ರೀತಿಯಲ್ಲಿ ಕ್ಲಪ್ತ ಸಮಯದಲ್ಲಿ ರಕ್ತನಿಧಿಗೆ ತಲುಪಿಸಲು ತಯಾರಿಸಿದ ವ್ಯಾನ್ ಲೋಕಾರ್ಪಣೆ ಮತ್ತು ರಕ್ತದಾನ ಮಾಡಲು ಅರಿವು ಮೂಡಿಸುತ್ತಿರುವ ಸಂಘ-ಸಂಸ್ಥೆಗಳಿಗೆ ಅಭಿನಂದನೆ ಕಾರ್ಯಕ್ರಮ ಶುಕ್ರವಾರ ಜರಗಿತು.

ಕೆಎಂಸಿ ಡೀನ್ ಡಾ। ಶರತ್ ಕುಮಾರ್ ರಾವ್ ಮಾತನಾಡಿ, ರಕ್ತದಾನ ಮಾಡುವವರು ಯಾರು ಮತ್ತು ರಕ್ತ ಸ್ವೀಕರಿಸುವವರು ಯಾರು ಎಂಬುದು ಮುಖ್ಯವಲ್ಲ, ಭವಿಷ್ಯದಲ್ಲಿ ಯಾವಾಗಾದರೂ ರಕ್ತದಾನಿಯು ರಕ್ತ ಸ್ವೀಕರಿಸುವವರು ಆಗಬಹುದು ಅಥವಾ ರಕ್ತ ಪಡೆದವರು ಮುಂದಿನ ದಿನಗಳಲ್ಲಿ ಆರೋಗ್ಯವಂತ ದಾನಿಗಳಾಗಬಹುದು. ಅದಕ್ಕಾಗಿಯೇ ಯಾವುದೇ ಅಪೇಕ್ಷೆಯಿಲ್ಲದೆ ರಕ್ತದಾನ ಮಾಡುವುದು ಅಗತ್ಯ ಎಂದರು.

ರಕ್ತವರ್ಗಾವಣೆ ವಿಭಾಗದ ಮುಖ್ಯಸ್ಥೆ ಪ್ರೊ। ಡಾ। ಶಮೀ ಶಾಸ್ತ್ರಿ ಅವರು, ವಿಶೇಷ ರಕ್ತದಾನದ ಬಗ್ಗೆ ಜಾಗೃತಿ ಮೂಡಿಸುವ ಕುರಿತು ಮಾತನಾಡಿದರು.

ಮಣಿಪಾಲ ಮಾಹೆ ಜನರಲ್ ಸರ್ವಿಸಸ್‌ನ ನಿರ್ದೇಶಕ ಕ। ಪ್ರಕಾಶ್ ಚಂದ್ರ ಬಿ., ಸಿ.ಜಿ. ಮುತ್ತಣ್ಣ, ಕಸ್ತೂರ್ಬಾ ಆಸ್ಪತ್ರೆಯ ಮುಖ್ಯ ನಿರ್ವಹಣಾಧಿಕಾರಿ ಉಪಸ್ಥಿತರಿದ್ದರು.

ಕಳೆದ ಹಲವಾರು ವರ್ಷಗಳಿಂದ ರಕ್ತದಾನ ಶಿಬಿರಗಳ ಮೂಲಕ ಸಂಸ್ಥೆಯೊಂದಿಗೆ ಕೈಜೋಡಿಸಿರುವ ಉಡುಪಿ ನಗರ ಬಿಜೆಪಿ ಯುವ ಮೋರ್ಚಾ, ಮೊಗವೀರ ಯುವ ಸಂಘಟನೆ ಉಡುಪಿ, ಅಭಯಹಸ್ತ ಚಾರಿಟೆಬಲ್ ಟ್ರಸ್ಟ್ ಉಡುಪಿ, ವಿಷ್ಣುಮೂರ್ತಿ ಸ್ನೇಹಿತರು ದೊಡ್ಡಣಗುಡ್ಡೆ, ಮಿಲಾಗ್ರಿಸ್ ಕಾಲೇಜು ಕಲ್ಯಾಣಪುರ, ಮಣಿಪಾಲ ಟೆಕ್ನಾಲಜೀಸ್ ಲಿ., ಕರಾವಳಿ ಯುವಕ ಮಂಡಲ ಉಡುಪಿ, ಹಿಂಜಾವೇ, ಬಂಟಕಲ್ಲು ತಾಂತ್ರಿಕ ಕಾಲೇಜು, ಸ.ಪ್ರ.ದ.ಕಾಲೇಜು ತೆಂಕನಿಡಿಯೂರು, ಎಂಜಿಎಂ ಕಾಲೇಜು, ಜಿಲ್ಲಾ ವಿಶ್ವಕರ್ಮ ಕಾರ್ಪೆಂಟರ್ಸ್ ಯೂನಿಯನ್ ಅವರನ್ನು ಅಭಿನಂದಿಸಲಾಯಿತು.

ವಿಜಯ ಕರ್ನಾಟಕ

ಸೋಮವಾರ, 4 ಅಕ್ಟೋಬರ್ 2021, ಮಂಗಳೂರು

# ವಿಶ್ವ ರಕ್ತದಾನ ದಿನ ಗೌರವಾರ್ಪಣೆ




**ಕಟಪಾಡಿ:** ಕಳೆದ 5 ವರ್ಷಗಳಿಂದ ರಕ್ತದಾನ ಶಿಬಿರ ನಡೆಸುತ್ತಿರುವ ಉಡುಪಿ ಜಿಲ್ಲಾ ವಿಶ್ವಕರ್ಮ ಕಾರ್ಪೆಂಟರ್ ಯೂನಿಯನ್‌ನ್ನು ವಿಶ್ವ ರಕ್ತದಾನ ದಿನದ ಸಂದರ್ಭದಲ್ಲಿ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ವತಿಯಿಂದ ಗೌರವಿಸಲಾಯಿತು.

ಸಂಘದ ಗೌರವ ಅಧ್ಯಕ್ಷ ಬಳ್ಕೂರು ಗೋಪಾಲ ಆಚಾರ್ಯ ಸಂಘದ ಪರವಾಗಿ ಗೌರವ ಸ್ವೀಕರಿಸಿದರು. ಸಂಘದ ಅಧ್ಯಕ್ಷ ಗೋಕುಲ ಆಚಾರ್ಯ ನಿಟ್ಟೂರು, ಪ್ರಧಾನ ಕಾರ್ಯದರ್ಶಿ ಜಯಕರ ಬೈಲೂರು, ಕೋಶಾಧಿಕಾರಿ ವಸಂತ ಆಚಾರ್ಯ, ಅನಂತಯ್ಯ ಆಚಾರ್ಯ, ಆಸ್ಪತ್ರೆಯ ಡೀನ್ ಡಾ.ಶರತ್ ಕುಮಾರ್ ರಾವ್, ಚೀಫ್ ಆಪರೇಟಿಂಗ್ ಆಫೀಸರ್ ಡಾ.ಸಿ.ಜಿ.ಮುತ್ತಣ್ಣ, ಡೈರೆಕ್ಟರ್ ಜನರಲ್ ಪ್ರಕಾಶ್ ಚಂದ್ರ ಬಿ., ಡಾ.ಶಮಿ ಉಪಸ್ಥಿತರಿದ್ದರು.

Hai Karavali

04th October 2021

ಅನುಮತಿ ದೊರೆಯುವ ಸಾಧ್ಯತೆ ಇದೆ" ಎಂದು ಹೇಳಿದ್ದಾರೆ.

# ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ






ಅವಶ್ಯಕ ರೋಗಿಗಳಿಗೆ ರಕ್ತ ಅಥವಾ ಅದರ ಘಟಕಗಳನ್ನು ದಾನ ಮಾಡುವುದು ಆಧುನಿಕ ಆರೋಗ್ಯ ವ್ಯವಸ್ಥೆಯಲ್ಲಿ ಮಾನವೀಯತೆಯ ಬಹುಮುಖ್ಯ ಭಾಗವಾಗಿದೆ. ಇದರ ಕುರಿತು ಜಾಗೃತಿ ಮೂಡಿಸಲು ಮತ್ತು ಸ್ವಯಂಪ್ರೇರಿತ ರಕ್ತದಾನವನ್ನು ಹೆಚ್ಚೆಚ್ಚು ಪ್ರಚಾರಪಡಿಸಿ ಪ್ರೋತ್ಸಾಹಿಸಿ ಹೆಚ್ಚಿನ ಜನ ಇದರಲ್ಲಿ ಪಾಲ್ಗೊಳ್ಳುವಂತೆ ಮಾಡುವ ದೃಷ್ಟಿಯಿಂದ ಅದಕ್ಕೆ ಪೂರಕವಾದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪ್ರತಿ ವರ್ಷ ಅಕ್ಟೋಬರ್ 1 ರಂದು ಭಾರತದಲ್ಲಿ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನವನ್ನಾಗಿ ಆಚರಿಸಲಾಗುತ್ತದೆ. ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ರಕ್ತ ಕೇಂದ್ರವು ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನವನ್ನು 2021ರ ಅಕ್ಟೋಬರ್ 1 ರ ಶುಕ್ರವಾರದಂದು ಆಚರಿಸಿತು. ಇದಕ್ಕೆ ಪೂರಕವಾಗಿ ಶಿಬಿರಗಳಿಗೆ ಅಗತ್ಯ ಸಲಕರಣೆಗಳನ್ನು ಕೊಂಡೊಯ್ಯಲು ಮತ್ತು ಸಂಗ್ರಹಿಸಿದ ರಕ್ತವನ್ನು ಸರಿಯಾದ ರೀತಿಯಲ್ಲಿ ಕ್ಲಪ್ತ ಸಮಯದಲ್ಲಿ ರಕ್ತನಿಧಿಗೆ ತಲುಪಿಸಲು ತಯಾರುಗೊಳಿಸಿದ ಸುಸಜ್ಜಿತ ವಾಹನವನ್ನು ಲೋಕಾರ್ಪಣೆಗೊಳಿಸಲಾಯಿತು. ಈ ಸಂದರ್ಭದಲ್ಲಿ ರಕ್ತದಾನ ಶಿಬಿರಗಳನ್ನು ಏರ್ಪಡಿಸುತ್ತಿರುವ ಮತ್ತು ಇದರ ಮೂಲಕ ಸಾರ್ವಜನಿಕರಲ್ಲಿ ರಕ್ತದಾನ ಮಾಡಲು ಅರಿವು ಮೂಡಿಸುತ್ತಿರುವ ಸಂಘ ಸಂಸ್ಥೆಗಳನ್ನು ಅಭಿನಂದಿಸಲಾಯಿತು. ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ. ಶರತ್ ಕುಮಾರ್ ರಾವ್ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು. ನೆರೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, "ರಕ್ತದಾನ ಮಾಡುವವರು ಯಾರು ಮತ್ತು ರಕ್ತ ಸ್ವೀಕರಿಸುವವರು ಯಾರು ಎಂಬುದು ಮುಖ್ಯವಲ್ಲ. ಭವಿಷ್ಯದಲ್ಲಿ ಯಾವಾಗಾದರೂ ರಕ್ತ ದಾನಿಯು ರಕ್ತ ಸ್ವೀಕರಿಸುವವರಾಗಬಹುದು ಅಥವಾ ರಕ್ತ ಪಡೆದವರು ಮುಂದಿನ ದಿನಗಳಲ್ಲಿ ಆರೋಗ್ಯವಂತ ದಾನಿಗಳಾಗಬಹುದು.

ವರದಿ: ರಕ್ಷಿತ್ ಕುಮಾರ್

HAI KARAVALI – Kannada Daily, Printed and Published by Ravindra A
KARNATAKA. Published at # 8,2,1,7C, Rajangana Parking Area Op

DAIJIWORLD


01st October 2021

# Udupi: KMC Manipal celebrates National voluntary blood donation day

**Udupi, Oct 1:** Donating blood or its components to a needy person has become a very important part of humanity in the modern health care system. To create awareness, every year on October 1, National voluntary blood donation day is celebrated in India.

Blood Center of Kasturba Hospital, Manipal celebrated National voluntary blood donation day on Friday, October 1, 2021. A dedicated blood center van was flagged off during the occasion and various recognized regional blood donor motivators were felicitated during the event.

Dr Sharath Kumar Rao, dean, Kasturba Medical College Manipal was the chief guest of the program and said, "It does not matter who is the donor of blood and who is the recipient of blood, in the future, it is also possible that the donor may become a recipient of blood and in the coming time, the recipient of blood may become a healthy donor. That is why donating blood without any desire is a great and important part of humanity in the process of saving lives".





Col Prakash Chandra B, director – General Services MAHE, Manipal, and CG Muthana, chief operating officer, Kasturba Hospital, Manipal were the guest of honour of the programme.

Col Prakash Chandra spoke about the importance of Blood Donation and said, "All the organizations should come forward to motivate the people for blood donation". On this occasion felicitation was carried out for BJP Yuva Morcha, Udupi City, Mogaveera Yuva Sanghatane (R), Udupi, Abhayahastha Charitable Trust (R), Udupi, Vishnumoorthy Friends (R), Doddanagudde, Udupi, Milagres College, Kallianpur, Manipal Technologies Limited, Manipal, Karavali Youth Club, Udupi, Hindu Jagarana Vedhike, Udupi, Sri Madhava Vadiraja Institute of Technology and Management, Bantakal, Govt First Grade College, Thenkanidiyur, Mahathma Gandhi Medical College, Kunjibettu, Udupi, and Udupi District Vishwakarma Carpenters Union (R), Udupi for organizing and motivating the people to donate blood.

Dr Shamee Shastry, professor and head, department of Immunohematology and Blood Transfusion, Kasturba Medical College Manipal mentioned about the need of creating awareness on special blood donation including apheresis donation and stem cell donation.

The Canara Post

01st October 2021

# National Voluntary Blood Donation Day observed at Kasturba Hospital

- *Dedicated blood center van flagged off*
- *Blood donor motivators felicitated*




**Manipal, Oct 1, 2021:** Blood Center of *Kasturba Hospital*, Manipal observed National Voluntary Blood Donation Day today.

A dedicated blood center van was flagged off and several recognized regional blood donor motivators were felicitated at the event.

Dr. Sharath Kumar Rao, Dean, Kasturba Medical College Manipal who was the chief guest of the program stressed on the importance of blood donation.



"Blood donation saves lives. It does not matter who is the donor of blood and who is the recipient of blood. A donor can be a recipient anytime and the recipient may turn healthy and become a donor. So donating blood without any desire is a great and important part of humanity," he said.

Col. Prakash Chandra B, Director – General Services MAHE, Manipal, and Mr. CG Muthana, Chief Operating Officer, Kasturba Hospital, Manipal were the guest of honor of the program.

B.J.P. Yuva Morcha, Udupi City, Mogaveera Yuva Sanghatane (R.), Udupi, Abhayahastha Charitable Trust (R.), Udupi, Vishnumoorthy Friends (R.), Doddanagudde, Udupi, Milagres College- Kallianpur, Manipal Technologies Limited- Manipal, Karavali Youth Club- Udupi, Hindu Jagarana Vedhike- Udupi, Sri Madhava Vadiraja Institute of Technology & Management- Bantakal, Govt. First Grade College- Thenkanidiyur, Mahathma Gandhi Memorial College- Kunjibettu, Udupi, and Udupi District Vishwakarma Carpenters Union (R.), Udupi were felicitated for organizing and motivating people to donate blood.

Dr. Shamee Shastry, Professor and Head, Dept. of Immunohematology and Blood Transfusion, Kasturba Medical College Manipal spoke about the need for creating awareness on special blood donation including apheresis donation and stem cell donation.

**Event Video Links**:

- https://youtu.be/MH7QUP99Y2U
- https://youtu.be/0PNxaKao5Qs

UDUPI BULLETIN

01st October 2021

# ಮಣಿಪಾಲ ಕೆ.ಎಂ.ಸಿ ಆಸ್ಪತ್ರೆ: ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನ ಆಚರಣೆ

By Udupi Bulletin News Desk - October 1, 2021 0




**ಮಣಿಪಾಲ:** ರೋಗಿಗಳಿಗೆ ರಕ್ತ ಅಥವಾ ಅದರ ಘಟಕಗಳನ್ನು ದಾನ ಮಾಡುವುದು ಆಧುನಿಕ ಆರೋಗ್ಯ ವ್ಯವಸ್ಥೆಯಲ್ಲಿ ಮಾನವೀಯತೆಯ ಬಹುಮುಖ್ಯ ಭಾಗವಾಗಿದೆ. ಇದರ ಕುರಿತು ಜಾಗೃತಿ ಮೂಡಿಸಲು ಮತ್ತು ಸ್ವಯಂಪ್ರೇರಿತ ರಕ್ತದಾನವನ್ನು ಹೆಚ್ಚೆಚ್ಚು ಪ್ರಚುರಪಡಿಸಿ ಪ್ರೋತ್ಸಾಹಿಸಿ ಹೆಚ್ಚಿನ ಜನ ಇದರಲ್ಲಿ ಪಾಲ್ಗೊಳ್ಳುವಂತೆ ಮಾಡುವ ದೃಷ್ಟಿಯಿಂದ ಅದಕ್ಕೆ ಪೂರಕವಾದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪ್ರತಿ ವರ್ಷ ಅಕ್ಟೋಬರ್ 1 ರಂದು ಭಾರತದಲ್ಲಿ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನವನ್ನಾಗಿ ಆಚರಿಸಲಾಗುತ್ತದೆ.

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ರಕ್ತ ಕೇಂದ್ರವು ಇಂದು ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನವನ್ನು ಆಚರಿಸಿತು. ಇದಕ್ಕೆ ಪೂರಕವಾಗಿ ಶಿಬಿರಗಳಿಗೆ ಅಗತ್ಯ ಸಲಕರಣೆಗಳನ್ನು ಕೊಂಡೊಯ್ಯಲು ಮತ್ತು ಸಂಗ್ರಹಿಸಿದ ರಕ್ತವನ್ನು ಸರಿಯಾದ ರೀತಿಯಲ್ಲಿ ಕ್ಲಪ್ತ ಸಮಯದಲ್ಲಿ ರಕ್ತ ನಿಧಿಗೆ ತಲುಪಿಸಲು ತಯಾರುಗೊಳಿಸಿದ ಸುಸಜ್ಜಿತ ವಾಹನವನ್ನು ಲೋಕಾರ್ಪಣೆಗೊಳಿಸಲಾಯಿತು. ಈ ಸಂದರ್ಭದಲ್ಲಿ ರಕ್ತದಾನ ಶಿಬಿರಗಳನ್ನು ಏರ್ಪಡಿಸುತ್ತಿರುವ ಮತ್ತು ಇದರ ಮೂಲಕ ಸಾರ್ವಜನಿಕರಲ್ಲಿ ರಕ್ತದಾನ ಮಾಡಲು ಅರಿವು ಮೂಡಿಸುತ್ತಿರುವ ಸಂಘ ಸಂಸ್ಥೆಗಳನ್ನು ಅಭಿನಂದಿಸಲಾಯಿತು.

ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ. ಶರತ್ ಕುಮಾರ್ ರಾವ್ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡುತ್ತಾ, ರಕ್ತದಾನ ಮಾಡುವವರು ಯಾರು ಮತ್ತು ರಕ್ತ ಸ್ವೀಕರಿಸುವವರು ಯಾರು ಎಂಬುದು ಮುಖ್ಯವಲ್ಲ, ಭವಿಷ್ಯದಲ್ಲಿ ಯಾವಾಗಾದರೂ ರಕ್ತದಾನಿಯು ರಕ್ತ ಸ್ವೀಕರಿಸುವವರಾಗಬಹುದು ಅಥವಾ ರಕ್ತ ಪಡೆದವರು ಮುಂದಿನ ದಿನಗಳಲ್ಲಿ ಆರೋಗ್ಯವಂತ ದಾನಿಗಳಾಗಬಹುದು. ಅದಕ್ಕಾಗಿಯೇ ಯಾವುದೇ ಅಪೇಕ್ಷೆಯಿಲ್ಲದೆ ರಕ್ತದಾನ ಮಾಡುವುದು ಜೀವ ಉಳಿಸುವ ಪ್ರಕ್ರಿಯೆಯಲ್ಲಿ ಮಾನವೀಯತೆಯ ಒಂದು ಮಹತ್ವದ ಮತ್ತು ಪ್ರಮುಖ ಭಾಗವಾಗಿದೆ ಎಂದರು.

ಮಾಹೆ ಮಣಿಪಾಲ ಡೈರೆಕ್ಟರ್ ಜನರಲ್ ಸರ್ವೀಸಸ್ ಕರ್ನಲ್ ಪ್ರಕಾಶ್ ಚಂದ್ರ ಬಿ, ಮತ್ತು ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ ಮುಖ್ಯ ನಿರ್ವಹಣಾಧಿಕಾರಿ ಸಿ. ಜಿ. ಮುತ್ತಣ್ಣ ಕಾರ್ಯಕ್ರಮದ ಗೌರವ ಅತಿಥಿಗಳಾಗಿದ್ದರು. ಕರ್ನಲ್ ಪ್ರಕಾಶ್ ಚಂದ್ರ ಅವರು ರಕ್ತದಾನದ ಮಹತ್ವದ ಕುರಿತು ಮಾತನಾಡಿದರು ಮತ್ತು ಎಲ್ಲಾ ಸಂಘ ಸಂಸ್ಥೆಗಳು ರಕ್ತದಾನಕ್ಕಾಗಿ ಜನರನ್ನು ಪ್ರೇರೇಪಿಸಲು ಮುಂದಾಗಬೇಕು ಎಂದು ಹೇಳಿದರು.

ಕಳೆದ ಹಲವಾರು ವರ್ಷಗಳಿಂದ ರಕ್ತದಾನ ಶಿಬಿರಗಳ ಮೂಲಕ ಮಣಿಪಾಲ ಕೆ.ಎಂ.ಸಿ ಆಸ್ಪತ್ರೆಯೊಂದಿಗೆ ಕೈಜೋಡಿಸಿರುವ ಬಿ.ಜೆ.ಪಿ. ಯುವ ಮೋರ್ಚಾ ಉಡುಪಿ ನಗರ, ಮೊಗವೀರ ಯುವ ಸಂಘಟನೆ (ರಿ.), ಉಡುಪಿ, ಅಭಯಹಸ್ತ ಚಾರಿಟೇಬಲ್ ಟ್ರಸ್ಟ್ (ರಿ. ), ಉಡುಪಿ, ವಿಷ್ಣುಮೂರ್ತಿ ಸ್ನೇಹಿತರು (ರಿ.) ದೊಡ್ಡನಗುಡ್ಡೆ ಉಡುಪಿ, ಮಿಲಾಗ್ರೆಸ್ ಕಾಲೇಜು ಕಲ್ಯಾಣಪುರ, ಮಣಿಪಾಲ ಟೆಕ್ನಾಲಜೀಸ್ ಲಿಮಿಟೆಡ್ ಮಣಿಪಾಲ, ಕರಾವಳಿ ಯುವಕರು ಕ್ಲಬ್ ಉಡುಪಿ, ಹಿಂದೂ ಜಾಗರಣ ವೇದಿಕೆ ಉಡುಪಿ, ಶ್ರೀ ಮಧ್ವ ವಾದಿರಾಜ ತಂತ್ರಜ್ಞಾನ ಮತ್ತು ನಿರ್ವಹಣಾ ಸಂಸ್ಥೆ, ಬಂಟಕಲ್, ಸರಕಾರಿ ಪ್ರಥಮ ದರ್ಜೆ ಕಾಲೇಜು ತೆಂಕನಿಡಿಯೂರು, ಮಹಾತ್ಮ ಗಾಂಧಿ ವೈದ್ಯಕೀಯ ಕಾಲೇಜು ಕುಂಜಿಬೆಟ್ಟು, ಉಡುಪಿ ಮತ್ತು ಉಡುಪಿ ಜಿಲ್ಲಾ ವಿಶ್ವಕರ್ಮ ಕಾರ್ಪೆಂಟರ್ಸ್ ಯೂನಿಯನ್ (ರಿ ), ಉಡುಪಿ ಇವರನ್ನು ಅಭಿನಂದಿಸಲಾಯಿತು.


ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮಣಿಪಾಲ ಇಮ್ಯುನೊಹೆಮಾಟಾಲಜಿ ಮತ್ತು ರಕ್ತ ವರ್ಗಾವಣೆ ವಿಭಾಗದ ಪ್ರೊಫೆಸರ್ ಮತ್ತು ಮುಖ್ಯಸ್ಥರಾದ ಡಾ. ಶಮೀ ಶಾಸ್ತ್ರಿ ಇವರು ಅಫೆರೆಸಿಸ್ ದಾನ ಮತ್ತು ಸ್ಟೆಮ್ ಸೆಲ್ ದಾನ ಸೇರಿದಂತೆ ವಿಶೇಷ ರಕ್ತದಾನದ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವನ್ನು ಉಲ್ಲೇಖಿಸಿದರು.

Karavali Xpress

**01st October 2021**

# ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನದ ಆಚರಣೆ

*By Janardhan Kodavoor/Team karavalixpress, October 1, 2021*




ಮಣಿಪಾಲ ರಕ್ತ ಕೇಂದ್ರ ದ ಸುಸಜ್ಜಿತ ವ್ಯಾನ್ ಲೋಕಾರ್ಪಣೆ ಮತ್ತು ರಕ್ತದಾನ ಮಾಡಲು ಅರಿವು ಮೂಡಿಸುತ್ತಿರುವ ಸಂಘ ಸಂಸ್ಥೆಗಳ ಅಭಿನಂದನೆ

ಮಣಿಪಾಲ: ಅವಶ್ಯ ರೋಗಿಗಳಿಗೆ ರಕ್ತ ಅಥವಾ ಅದರ ಘಟಕ ಗಳನ್ನು ದಾನ ಮಾಡುವುದು ಆಧುನಿಕ ಆರೋಗ್ಯ ವ್ಯವಸ್ಥೆಯಲ್ಲಿ ಮಾನವೀಯತೆಯ ಬಹುಮುಖ್ಯ ಭಾಗವಾಗಿದೆ.

ಇದರ ಕುರಿತು ಜಾಗೃತಿ ಮೂಡಿಸಲು ಮತ್ತು ಸ್ವಯಂಪ್ರೇರಿತ ರಕ್ತದಾನವನ್ನು ಹೆಚ್ಚೆಚ್ಚು ಪ್ರಚುರ ಪಡಿಸಿ ಪ್ರೋತ್ಸಾಹಿಸಿ ಹೆಚ್ಚಿನ ಜನ ಇದರಲ್ಲಿ ಪಾಲ್ಗೊಳ್ಳುವಂತೆ ಮಾಡುವ ದೃಷ್ಟಿಯಿಂದ ಅದಕ್ಕೆ ಪೂರಕವಾದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪ್ರತಿ ವರ್ಷ ಅಕ್ಟೋಬರ್ 1 ರಂದು ಭಾರತದಲ್ಲಿ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನವನ್ನಾಗಿ ಆಚರಿಸಲಾಗುತ್ತದೆ.

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ರಕ್ತ ಕೇಂದ್ರವು ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನವನ್ನು 2021 ರ ಅಕ್ಟೋಬರ್ 1 ರ ಶುಕ್ರವಾರದಂದು ಆಚರಿಸಿತು. ಇದಕ್ಕೆ ಪೂರಕವಾಗಿ ಶಿಬಿರಗಳಿಗೆ ಅಗತ್ಯ ಸಲಕರಣೆಗಳನ್ನು ಕೊಂಡೊಯ್ಯಲು ಮತ್ತು ಸಂಗ್ರಹಿಸಿದ ರಕ್ತವನ್ನು ಸರಿ ಯಾದ ರೀತಿಯಲ್ಲಿ ಕ್ಲಪ್ತ ಸಮಯದಲ್ಲಿ ರಕ್ತನಿಧಿಗೆ ತಲುಪಿಸಲು ತಯಾರುಗೊಳಿಸಿದ ಸುಸಜ್ಜಿತ ವಾಹನವನ್ನು ಲೋಕಾರ್ಪಣೆಗೊಳಿಸಲಾಯಿತು.

ಈ ಸಂದರ್ಭದಲ್ಲಿ ರಕ್ತದಾನ ಶಿಬಿರಗಳನ್ನು ಏರ್ಪಡಿಸುತ್ತಿರುವ ಮತ್ತು ಇದರ ಮೂಲಕ ಸಾರ್ವಜನಿ ಕರಲ್ಲಿ ರಕ್ತದಾನ ಮಾಡಲು ಅರಿವು ಮೂಡಿಸುತ್ತಿರುವ ಸಂಘ ಸಂಸ್ಥೆಗಳನ್ನು ಅಭಿನಂದಿಸಲಾ ಯಿತು.

ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಶರತ್ ಕುಮಾರ್ ರಾವ್ ಕಾರ್ಯ ಕ್ರಮದ ಮುಖ್ಯ ಅತಿಥಿಯಾಗಿದ್ದರು. ನೆರೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು , "ರಕ್ತದಾನ ಮಾಡುವವರು ಯಾರು ಮತ್ತು ರಕ್ತ ಸ್ವೀಕರಿಸುವವರು ಯಾರು ಎಂಬುದು ಮುಖ್ಯವಲ್ಲ, ಭವಿಷ್ಯದಲ್ಲಿ ಯಾವಾಗಾದರೂ ರಕ್ತ ದಾನಿಯು ರಕ್ತ ಸ್ವೀಕರಿಸುವವರಾಗಬಹುದು ಅಥವಾ ರಕ್ತ ಪಡೆದವರು ಮುಂದಿನ ದಿನಗಳಲ್ಲಿ ಆರೋಗ್ಯವಂತ ದಾನಿಗಳಾಗಬಹುದು.

ಅದಕ್ಕಾಗಿಯೇ ಯಾವುದೇ ಅಪೇಕ್ಷೆಯಿಲ್ಲದೆ ರಕ್ತದಾನ ಮಾಡುವುದು ಜೀವ ಉಳಿಸುವ ಪ್ರಕ್ರಿಯೆ ಯಲ್ಲಿ ಮಾನವೀಯತೆಯ ಒಂದು ಮಹತ್ವದ ಮತ್ತು ಪ್ರಮುಖ ಭಾಗವಾಗಿದೆ" ಎಂದರು. ಕರ್ನಲ್ ಪ್ರಕಾಶ್ ಚಂದ್ರ ಬಿ, ಡೈರೆಕ್ಟರ್ - ಜನರಲ್ ಸರ್ವೀಸಸ್ ಮಾಹೆ , ಮಣಿಪಾಲ, ಮತ್ತು ಶ್ರೀ ಸಿ ಜಿ ಮುತ್ತಣ್ಣ, ಮುಖ್ಯ ನಿರ್ವಹಣಾಧಿಕಾರಿ, ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲ ಕಾರ್ಯಕ್ರಮದ ಗೌರವ ಅತಿಥಿಗಳಾಗಿದ್ದರು.

ಕರ್ನಲ್ ಪ್ರಕಾಶ್ ಚಂದ್ರ ಅವರು ರಕ್ತದಾನದ ಮಹತ್ವದ ಕುರಿತು ಮಾತನಾಡಿದರು ಮತ್ತು "ಎಲ್ಲಾ ಸಂಘ ಸಂಸ್ಥೆಗಳು ರಕ್ತದಾನಕ್ಕಾಗಿ ಜನರನ್ನು ಪ್ರೇರೇಪಿಸಲು ಮುಂದಾಗಬೇಕು" ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಳೆದ ಹಲವಾರು ವರ್ಷಗಳಿಂದ ರಕ್ತದಾನ ಶಿಬಿರಗಳ ಮೂಲಕ ನಮ್ಮೊಂದಿಗೆ ಕೈಜೋಡಿಸಿರುವ, ಬಿ.ಜೆ.ಪಿ. ಯುವ ಮೋರ್ಚಾ, ಉಡುಪಿ ನಗರ, ಮೊಗವೀರ ಯುವ ಸಂಘಟನೆ (ರಿ .), ಉಡುಪಿ, ಅಭಯಹಸ್ತ ಚಾರಿಟಬಲ್ ಟ್ರಸ್ಟ್ (ರಿ ), ಉಡುಪಿ, ವಿಷ್ಣುಮೂರ್ತಿ ಸ್ನೇಹಿತರು (ರಿ ), ದೊಡ್ಡನಗುಡ್ಡೆ, ಉಡುಪಿ, ಮಿಲಾಗ್ರೆಸ್ ಕಾಲೇಜು, ಕಲ್ಯಾಣಪುರ , ಮಣಿಪಾಲ ಟೆಕ್ನಾಲ ಜೀಸ್ ಲಿಮಿಟೆಡ್, ಮಣಿಪಾಲ, ಕರಾವಳಿ ಯುವಕರು ಕ್ಲಬ್, ಉಡುಪಿ, ಹಿಂದೂ ಜಾಗರಣ ವೇದಿಕೆ, ಉಡುಪಿ, ಶ್ರೀ ಮಾಧವ ವಾದಿರಾಜ ತಂತ್ರಜ್ಞಾನ ಮತ್ತು ನಿರ್ವಹಣಾ ಸಂಸ್ಥೆ, ಬಂಟಕಲ್, ಸರಕಾರಿ ಪ್ರಥಮ ದರ್ಜೆ ಕಾಲೇಜು, ತೆಂಕನಿಡಿಯೂರು, ಮಹಾತ್ಮ ಗಾಂಧಿ ವೈದ್ಯಕೀಯ ಕಾಲೇಜು, ಕುಂಜಿಬೆಟ್ಟು, ಉಡುಪಿ, ಮತ್ತು ಉಡುಪಿ ಜಿಲ್ಲಾ ವಿಶ್ವಕರ್ಮ ಕಾರ್ಪೆಂಟರ್ಸ್ ಯೂನಿಯನ್ (ರಿ ), ಉಡುಪಿ ಇವರನ್ನು ಅಭಿನಂದಿಸಲಾಯಿತು.

ಡಾ. ಶಮೀ ಶಾಸ್ತ್ರಿ, ಪ್ರೊಫೆಸರ್ ಮತ್ತು ಮುಖ್ಯಸ್ಥರು , ಇಮ್ಯುನೊಹೆಮಾಟಾಲಜಿ ಮತ್ತು ರಕ್ತ ವರ್ಗಾವಣೆ ವಿಭಾಗ, ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮಣಿಪಾಲ ಇವರು ಅಫೆರೆಸಿಸ್ ದಾನ ಮತ್ತು ಸ್ಟೆಮ್ ಸೆಲ್ ದಾನ ಸೇರಿದಂತೆ ವಿಶೇಷ ರಕ್ತದಾನದ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವನ್ನು ಉಲ್ಲೇಖಿಸಿದರು

PublicNext

01st October 2021

# ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ

ಮಣಿಪಾಲ: ಅವಶ್ಯ ರೋಗಿಗಳಿಗೆ ರಕ್ತ ಅಥವಾ ಅದರ ಘಟಕಗಳನ್ನು ದಾನ ಮಾಡುವುದು ಆಧುನಿಕ ಆರೋಗ್ಯ ವ್ಯವಸ್ಥೆಯಲ್ಲಿ ಮಾನವೀಯತೆಯ ಬಹುಮುಖ್ಯ ಭಾಗವಾಗಿದೆ. ಇದರ ಕುರಿತು ಜಾಗೃತಿ ಮೂಡಿಸಲು ಮತ್ತು ಸ್ವಯಂಪ್ರೇರಿತ ರಕ್ತದಾನವನ್ನು ಹೆಚ್ಚೆಚ್ಚು ಪ್ರಚುರಪಡಿಸಿ ಪ್ರೋತ್ಸಾಹಿಸಿ ಹೆಚ್ಚಿನ ಜನ ಇದರಲ್ಲಿ ಪಾಲ್ಗೊಳ್ಳುವಂತೆ ಮಾಡುವ ದೃಷ್ಟಿಯಿಂದ ಅದಕ್ಕೆ ಪೂರಕವಾದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪ್ರತಿ ವರ್ಷ ಅಕ್ಟೋಬರ್ 1 ರಂದು ಭಾರತದಲ್ಲಿ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನವನ್ನಾಗಿ ಆಚರಿಸಲಾಗುತ್ತದೆ. ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ರಕ್ತ ಕೇಂದ್ರವು ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನವನ್ನು 2021 ರ ಅಕ್ಟೋಬರ್ 1 ರ ಶುಕ್ರವಾರದಂದು ಆಚರಿಸಿತು. ಇದಕ್ಕೆ ಪೂರಕವಾಗಿ ಶಿಬಿರಗಳಿಗೆ ಅಗತ್ಯ ಸಲಕರಣೆಗಳನ್ನು ಕೊಂಡೊಯ್ಯಲು ಮತ್ತು ಸಂಗ್ರಹಿಸಿದ ರಕ್ತವನ್ನು ಸರಿಯಾದ ರೀತಿಯಲ್ಲಿ ಕ್ಲಪ್ತ ಸಮಯದಲ್ಲಿ ರಕ್ತನಿಧಿಗೆ ತಲುಪಿಸಲು ತಯಾರುಗೊಳಿಸಿದ ಸುಸಜ್ಜಿತ ವಾಹನವನ್ನು ಲೋಕಾರ್ಪಣೆಗೊಳಿಸಲಾಯಿತು. ಈ ಸಂದರ್ಭದಲ್ಲಿ ರಕ್ತದಾನ ಶಿಬಿರಗಳನ್ನು ಏರ್ಪಡಿಸುತ್ತಿರುವ ಮತ್ತು ಇದರ ಮೂಲಕ ಸಾರ್ವಜನಿಕರಲ್ಲಿ ರಕ್ತದಾನ ಮಾಡಲು ಅರಿವು ಮೂಡಿಸುತ್ತಿರುವ ಸಂಘಸಂಸ್ಥೆಗಳನ್ನು ಅಭಿನಂದಿಸಲಾಯಿತು.ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಶರತ್ ಕುಮಾರ್ ರಾವ್ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು. ನೆರೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು , "ರಕ್ತದಾನ ಮಾಡುವವರು ಯಾರು ಮತ್ತು ರಕ್ತ ಸ್ವೀಕರಿಸುವವರು ಯಾರು ಎಂಬುದು ಮುಖ್ಯವಲ್ಲ, ಭವಿಷ್ಯದಲ್ಲಿ ಯಾವಾಗಾದರೂ ರಕ್ತ ದಾನಿಯು ರಕ್ತ ಸ್ವೀಕರಿಸುವವರಾಗಬಹುದು ಅಥವಾ ರಕ್ತ ಪಡೆದವರು ಮುಂದಿನ ದಿನಗಳಲ್ಲಿ ಆರೋಗ್ಯವಂತ ದಾನಿಗಳಾಗಬಹುದು. ಅದಕ್ಕಾಗಿಯೇ ಯಾವುದೇ ಅಪೇಕ್ಷೆಯಿಲ್ಲದೆ ರಕ್ತದಾನ ಮಾಡುವುದು ಜೀವ ಉಳಿಸುವ ಪ್ರಕ್ರಿಯೆಯಲ್ಲಿ ಮಾನವೀಯತೆಯ ಒಂದು ಮಹತ್ವದ ಮತ್ತು ಪ್ರಮುಖ ಭಾಗವಾಗಿದೆ" ಎಂದರು. ಕರ್ನಲ್ ಪ್ರಕಾಶ್ ಚಂದ್ರ ಬಿ, ಡೈರೆಕ್ಟರ್ - ಜನರಲ್ ಸರ್ವೀಸಸ್ ಮಾಹೆ , ಮಣಿಪಾಲ, ಮತ್ತು ಸಿ ಜಿ ಮುತ್ತಣ್ಣ, ಮುಖ್ಯ ನಿರ್ವಹಣಾಧಿಕಾರಿ, ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲ ಕಾರ್ಯಕ್ರಮದ ಗೌರವ ಅತಿಥಿಗಳಾಗಿದ್ದರು.

ಕರ್ನಲ್ ಪ್ರಕಾಶ್ ಚಂದ್ರ ಅವರು ರಕ್ತದಾನದ ಮಹತ್ವದ ಕುರಿತು ಮಾತನಾಡಿದರು ಮತ್ತು "ಎಲ್ಲಾ ಸಂಘ ಸಂಸ್ಥೆಗಳು ರಕ್ತದಾನಕ್ಕಾಗಿ ಜನರನ್ನು ಪ್ರೇರೇಪಿಸಲು ಮುಂದಾಗಬೇಕು" ಎಂದು ಹೇಳಿದರು. ಈ ಸಂದರ್ಭದಲ್ಲಿ ಕಳೆದ ಹಲವಾರು ವರ್ಷಗಳಿಂದ ರಕ್ತದಾನ ಶಿಬಿರಗಳ ಮೂಲಕ ನಮ್ಮೊಂದಿಗೆ ಕೈಜೋಡಿಸಿರುವ, ಬಿ.ಜೆ.ಪಿ. ಯುವ ಮೋರ್ಚಾ, ಉಡುಪಿ ನಗರ, ಮೊಗವೀರ ಯುವ ಸಂಘಟನೆ (ರಿ .), ಉಡುಪಿ, ಅಭಯಹಸ್ತ ಚಾರಿಟಬಲ್ ಟ್ರಸ್ಟ್ (ರಿ ), ಉಡುಪಿ, ವಿಷ್ಣುಮೂರ್ತಿ ಸ್ನೇಹಿತರು (ರಿ ), ದೊಡ್ಡನಗುಡ್ಡೆ, ಉಡುಪಿ, ಮಿಲಾಗ್ರೆಸ್ ಕಾಲೇಜು, ಕಲ್ಯಾಣಪುರ , ಮಣಿಪಾಲ ಟೆಕ್ನಾಲಜೀಸ್ ಲಿಮಿಟೆಡ್, ಮಣಿಪಾಲ, ಕರಾವಳಿ ಯುವಕರು ಕ್ಲಬ್, ಉಡುಪಿ, ಹಿಂದೂ ಜಾಗರಣ ವೇದಿಕೆ, ಉಡುಪಿ, ಶ್ರೀ ಮಾಧವ ವಾದಿರಾಜ ತಂತ್ರಜ್ಞಾನ

ಮತ್ತು ನಿರ್ವಹಣಾ ಸಂಸ್ಥೆ, ಬಂಟಕಲ್, ಸರಕಾರಿ ಪ್ರಥಮ ದರ್ಜೆ ಕಾಲೇಜು, ತೆಂಕನಿಡಿಯೂರು, ಮಹಾತ್ಮ ಗಾಂಧಿ ವೈದ್ಯಕೀಯ ಕಾಲೇಜು, ಕುಂಜಿಬೆಟ್ಟು, ಉಡುಪಿ, ಮತ್ತು ಉಡುಪಿ ಜಿಲ್ಲಾ ವಿಶ್ವಕರ್ಮ ಕಾರ್ಪೆಂಟರ್ಸ್ ಯೂನಿಯನ್ (ರಿ ), ಉಡುಪಿ ಇವರನ್ನು ಅಭಿನಂದಿಸಲಾಯಿತು.

ಡಾ. ಶಮೀ ಶಾಸ್ತ್ರಿ, ಪ್ರೊಫೆಸರ್ ಮತ್ತು ಮುಖ್ಯಸ್ಥರು , ಇಮ್ಯುನೊಹೆಮಾಟಾಲಜಿ ಮತ್ತು ರಕ್ತ ವರ್ಗಾವಣೆ ವಿಭಾಗ, ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮಣಿಪಾಲ ಇವರು ಅಫೆರೆಸಿಸ್ ದಾನ ಮತ್ತು ಸ್ಟೆಮ್ ಸೆಲ್ ದಾನ ಸೇರಿದಂತೆ ವಿಶೇಷ ರಕ್ತದಾನದ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವನ್ನು ಉಲ್ಲೇಖಿಸಿದರು.